"ಏನಿಲ್ಲ... ಮಕ್ಕಳಲ್ವಾ..."

ನಾಗರಬೆತ್ತವನ್ನು ನಾಲ್ಕೈದು ಬಾರಿ ಬೆಂಚಿಗೆ ಬಡಿದ ಸದರ್ ಜೋರಾಗಿ ಮಕ್ಕಳಿಗೆ ಹೇಳಿದರು:

"ಬಾಯ್ಮುಚ್ಚಿ ಕೂತರೆ ಸರಿ. ಇಲ್ಲ ಅಂದರೆ..."

ಬೆಂಚಿಗೆ ಬಿದ್ದ ಏಟುಗಳಲ್ಲಿ ಒಂದೇಟು ಮಮ್ಮುಮುಕ್ರಿಯ ಎದೆಗೆ ಬಿದ್ದಿರಬೇಕು.

ಬೆಲ್ ಸದ್ದು ಕೇಳಿದ್ದೇ ಮಮ್ಮುಮುಕ್ರಿ ಸ್ಲೇಟಿನ ಚಿತ್ರಗಳನ್ನೆಲ್ಲ ಒರೆಸಿದರು.

ಮಕ್ಕಳ ಮುಖದಲ್ಲಿ ಚಿತ್ರ ಮಾಯವಾದ ದುಃಖ ಕಂಡು ಮತ್ತೆ ಹೇಗೋ ಸಂತೈಸಿದರು.

"ಪರವಾಗಿಲ್ಲ ಆಯ್ತಾ. ನಾವು ನಾಳೆಯೂ ಚಿತ್ರ ಬಿಡಿಸೋಣ."

ಮತ್ತೆ ಮೊದಲಿನಂತೆ ಪಿಸುಮಾತಿನಲ್ಲಿ ಹೇಳಿದರು:

"ಬೇರೆ ಯಾರಿಗೂ ತೋರಿಸಬಾರದು ಆಯ್ತಾ."

ಹೌದು. ಬೇರೆ ಯಾರೂ ಕಾಣಬಾರದು!

ಜನರೆಂದರೆ ಮಮ್ಮುಮುಕ್ರಿಗೆ ಒಂಥರಾ ಭಯ. ಬೇಟೆಗಾರನ ಕಣ್ಣಿಗೆ ಬಿದ್ದ ಜಿಂಕೆಯಂತೆ ಅವರ ಮುಖ ಯಾವಾಗಲೂ ಭಯದಿಂದಲೇ ಇರುತ್ತಿತ್ತು. ಅವರ ಭಯಭೀತ ಕಣ್ಣುಗಳು ನೋಟ ತಪ್ಪಿಸುತ್ತಿದ್ದವು. ಆದರೆ, ತುದಿಗಣ್ಣಲ್ಲಿ ಏನಾದರೂ ಹುಡುಕುತ್ತಿರುತ್ತಿದ್ದರು. ಅವರ ಬೆರಳುಗಳು ಮೇಜಿನ ಮೇಲೆ ಸುಮ್ಮನೆ ಕೂರುವುದಿಲ್ಲ. ಶೂನ್ಯದಲ್ಲಿ ಏನೋ ಗೀಚುವುದು ಬೆರಳುಗಳ ಹುಟ್ಟು ಅಭ್ಯಾಸ. ಮದರಸಕ್ಕೆ ಮಸೀದಿ ವತಿಯಿಂದ ಚಾ ಬರುತ್ತಿತ್ತು. ಚಹಾದ ಗ್ಲಾಸು ಯಾವಾಗಲೂ ಒದ್ದೆಯಾಗಿರಲೆಂದು ಅವರು ಬಯಸುತ್ತಿದ್ದರು. ಗ್ಲಾಸು ತೆಗೆದರೆ ಮೇಜಿನ ಮೇಲೆ ವೃತ್ತವೊಂದು ಮೂಡುತ್ತಲ್ಲ. ಅದು ಕಾಣುವಾಗ ಅವರ ಮುಖದಲ್ಲಿ ಪುಟ್ಟ ಮಕ್ಕಳ ಹಾಗೆ ಕುತೂಹಲ ಮೂಡುವುದು. ಮರುಕ್ಷಣವೇ ಕೈಬೆರಳುಗಳು ಆ ವೃತ್ತಕ್ಕೆ ಮುತ್ತಿಗೆ ಹಾಕಿ ನೀರಹನಿಗಳನ್ನು ಎಳೆದಾಡಿ ಸೆಕೆಂಡುಗಳೊಳಗೆ ಚಿತ್ರ ಬಿಡಿಸುತ್ತಿದ್ದವು. ಮತ್ತೆ ಯಾವುದೋ ನೆನಪಿನ ಗರ್ಭದಿಂದ ಎದ್ದು ಬಂದವರಂತೆ ಗಡಿಬಿಡಿಯಲ್ಲಿ ಆ ಚಿತ್ರವನ್ನು ಒರೆಸಿ ಹಾಕುತ್ತಿದ್ದರು.

ಅಂತೂ ಒಂದು ದಿನ ಅದು ಖತೀಬರ ಕಣ್ಣಿಗೆ ಬಿದ್ದೇ ಬಿಟ್ಟಿತು. ಚಹಾದ ಲೆಕ್ಕ ಬರೆದಿದ್ದ ಕಾಗದದ ಮರುಪುಟದಲ್ಲಿ ಕೋಣದ ಚಿತ್ರ! ಎಲ್ಲೆಂದರಲ್ಲಿ ಪ್ರತ್ಯಕ್ಷವಾಗುತ್ತಿದ್ದ ಇಂತಹ ಚಿತ್ರಗಳು ಈಗಾಗಲೇ ಖತೀಬರ ಗಮನಕ್ಕೂ ಬಂದಿದ್ದವು.

ಮದರಸ ಮುಗಿದ ಬಳಿಕ ಖತೀಬರು ಎಲ್ಲ ಉಸ್ತಾದರುಗಳನ್ನೂ ಸೇರಿಸಿ ಮೀಟಿಂಗ್ ಕರೆದೇ ಬಿಟ್ಟರು.

ಚಹಾದ ಕಾಗದದ ಚಿತ್ರ ತೋರಿಸುತ್ತಾ ಅವರು ಗುಡುಗಿದರು.

"ಈ ಚಿತ್ರ ಬಿಡಿಸಿದವರು ಯಾರು?"

ಯಾರೂ ಬಾಯಿ ತೆರೆಯುತ್ತಿಲ್ಲ.

"ಪ್ರಶ್ನೆ ಕೇಳಿಸಿಲ್ವಾ? ಉಸ್ತಾದರುಗಳಲ್ಲದೆ ಮಕ್ಕಳ ಕೈಗೆ ಈ ಕಾಗದ ಸಿಗಲಿಕ್ಕಿಲ್ಲವಲ್ಲ?"

ಚಿತ್ರವಿದ್ದ ಕಾಗದ ತುಂಡನ್ನು ಇನ್ನೂ ಸ್ವಲ್ಪ ಎತ್ತಿ ಹಿಡಿದರು.

ಪ್ರಾಯದಲ್ಲಿ ತುಸು ಹಿರಿಯರಾಗಿದ್ದ ಅಬ್ದುಲ್ಲ ಮೊಯಿಲಾರ್ ಆ ಚಿತ್ರವನ್ನು ಎತ್ತಿಕೊಂಡು ಸೂಕ್ಷ್ಮವಾಗಿ ನೋಡಿದರು.

"ಹೋ. ಕೋಣದ ತಲೆ. ಈ ಕೋಣವನ್ನು ಎಲ್ಲೋ ನೋಡಿದ ಹಾಗಿದೆಯಲ್ಲ."

ಅಬ್ದುಲ್ಲ ಮೊಯಿಲಾರ್ ಖತೀಬರನ್ನು ಮತ್ತು ಚಿತ್ರವನ್ನು ಮತ್ತೆಮತ್ತೆ ನೋಡಿದರು.

ಕೋಪದಿಂದ ಕುದಿಯುತ್ತಿದ್ದ ಖತೀಬರ ಕಣ್ಣುಗಳಿಂದ ಕಿಡಿ ಹಾರಿದವು.

ಮೀಟಿಂಗ್ ಕೊನೆಯಲ್ಲಿ ಅವರು ಘರ್ಜಿಸಿದರು: